RNU AIR DHARWAD

MARCH 09, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ತುಂಗಭದ್ರಾ ನೀರಿನ ಸದ್ಬಳಕೆ: ಆಂಧ್ರ ಮತ್ತು ತೆಲಂಗಾಣಾ ಮುಖ್ಯಮಂತ್ರಿಗಳ ಜೊತೆ, ಶೀಘ್ರ ಸಭೆ – ಡಿ.ಕೆ.ಶಿವಕುಮಾರ.**
- **‘ನಾರಿ ಶಕ್ತಿಯಿಂದ, ವಿಕಸಿತ ಭಾರತ’ ಧ್ಯೇಯದೊಂದಿಗೆ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ.**
- **ಲೋಕ ಅದಾಲತ್: ನ್ಯಾಯಾಲಯಗಳಲ್ಲಿ ಸಂಧಾನದ ಮೂಲಕ, ಗಣನೀಯ ಪ್ರಕರಣಗಳ ಇತ್ಯರ್ಥ.**
- **ಪಂಡಿತ ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಪ್ರಶಸ್ತಿಗೆ ಡಿ.ಕುಮಾರ್‌ದಾಸ್ ಹಾಗೂ ಯುವ ಪ್ರಶಸ್ತಿಗೆ ವಿನಾಯಕ ಹೆಗಡೆ ಭಾಜನ.**

<><><>

**ಈಗ ವಾರ್ತೆಗಳ ವಿವರ**

<><><>

**ಕಲ್ಯಾಣ ಕರ್ನಾಟಕದ, ತುಂಗಭದ್ರಾ ಅಣೆಕಟ್ಟೆ ವ್ಯಾಪ್ತಿಯ ನೀರಾವರಿಗೆ ಸಂಬಂಧಿಸಿ, ಪೋಲಾಗುವ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳಲು, ಆಂಧ್ರ ಮತ್ತು ತೆಲಂಗಾಣಾ ಮುಖ್ಯಮಂತ್ರಿಗಳ ಜೊತೆ, ಸದ್ಯದಲ್ಲೇ ಸಭೆ ನಡೆಸುವುದಾಗಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ತಿಳಿಸಿದ್ದಾರೆ. ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ, ಕಲ್ಯಾಣ ಪಥ ಯೋಜನೆಯಡಿ, ಗ್ರಾಮೀಣ ರಸ್ತೆಗಳನ್ನು, ಅಭಿವೃದ್ಧಿ ಪಡಿಸಲಾಗುತ್ತಿದೆ; ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ, 5 ಸಾವಿರ ಕೋಟಿ ರೂಪಾಯಿ ಅನುದಾನ ನೀಡಲಾಗಿದೆ ಎಂದರು.**

<><><>

**ಶಿವಮೊಗ್ಗ ಸಮೀಪದ, ಹೊಳಲೂರು ಏತ ನೀರಾವರಿಯ, ಬಾಕಿ ಕಾಮಗಾರಿಯನ್ನು, ಮೂರು ತಿಂಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದು, ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್.ಬೋಸರಾಜು ಹೇಳಿದ್ದಾರೆ. ಶಿವಮೊಗ್ಗ ತಾಲೂಕಿನ ಹೊಳಲೂರಿನಲ್ಲಿ ಅವರು ಸುದ್ದಿಗಾರರೊಂದಿಗೆ, ಮಾತನಾಡಿದರು. ಏತ ನೀರಾವರಿ ಯೋಜನಾ ಪ್ರದೇಶದ**

ವ್ಯಾಪ್ತಿಗೊಳಪಟ್ಟ ವಿವಿಧ ಸ್ಥಳಗಳಿಗೆ ತಾವು ಖುದ್ದು ಭೇಟಿ ನೀಡಿದ್ದು, 2008 ರಲ್ಲಿ ಈ ಯೋಜನೆಯ ಅನು ಾ್ಠನಕ್ಕೆ, 21 ಕೋಟಿ ರೂಪಾಯಿ ವ್ಯಯಿಸಲಾಗಿದೆ. ಸೊರಬ ತಾಲೂಕಿನಲ್ಲಿ ಆರು ಏತ ನೀರಾವರಿ ಯೋಜನೆಗಳಿಗೆ ಚಾಲನೆ ನೀಡಲಾಗಿದೆ ಎಂದರು.

<><><>

ಕೃಷಿ ಪತ್ತಿನ ಸಹಕಾರಿ ಸಂಘಗಳು, ಗ್ರಾಮೀಣ ಭಾಗದ ರೈತರ ಸಂಕ ್ಟ ಕಾಲದಲ್ಲಿ ಕೈ ಹಿಡಿದಿವೆ. ರೈತರಿಗೆ ಆರ್ಥಿಕ ಊರೆಗೋಲಾಗಿ, ಸಹಕಾರಿ ಕ್ಷೇತ್ರ ಕಾರ್ಯ ನಿರ್ವಹಿಸುತ್ತಿದೆ ಎಂದು, ಸಹಕಾರ ಖಾತೆ ಸಚಿವ ಕೆ.ಎನ್ ರಾಜಣ್ಣ ತಿಳಿಸಿದ್ದಾರೆ. ಹಾವೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಹಕಾರ ಸಂಘಗಳು ರಾಜ್ಯದ ಕಾರ್ಖಾನೆಗಳಿಗೂ ಬೆಂಬಲವಾಗಿ ನಿಂತಿವೆ. ರಾಜ್ಯದಲ್ಲಿ ಸಹಕಾರ ಕ್ಷೇತ್ರ ಪ್ರಗತಿಯತ್ತ ಸಾಗುತ್ತಿದೆ. ಜನಪರ ಸಹಕಾರ ಕ್ಷೇತ್ರವಾಗಿ, ದೇಶದಲ್ಲೇ ಮಾದರಿ ಆರ್ಥಿಕತೆಯಾಗಿ ಮುಂಚೂಣಿಗೆ ಬರಲಿದೆ ಎಂದರು. ಭೂ ರಹಿತ ಕೃಷಿಕರಿಗೂ ಸಾಲ ಸೌಲಭ್ಯ ಒದಗಿಸಲು, ಕೃಷಿ ಪತ್ತಿನ ಸಹಕಾರ ಸಂಘಗಳು ಯೋಜಿಸಬೇಕು ಎಂದು, ಸಚಿವ ರಾಜಣ್ಣ ಅಭಿಪ್ರಾಯಪಟ್ಟರು.

<><><>

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆ, ಹೊಸ ದಿಲ್ಲಿಯ ವಿಜ್ಞಾನ ಭವನದಲ್ಲಿ, 'ನಾರಿ ಶಕ್ತಿಯಿಂದ, ವಿಕಸಿತ ಭಾರತ' ಧ್ಯೇಯದೊಂದಿಗೆ, ಕೇಂದ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ವಿಶೇಷ ಕಾರ್ಯಕ್ರಮ ಆಯೋಜಿಸಿತ್ತು. #SheBuildsBharat ಟ್ಯಾಗ್ ನೊಂದಿಗೆ, ಮಹಿಳೆಯರ ವಿಶಿಷ್ಟ ಕೊಡುಗೆಗಳನ್ನು ಸಂಭ್ರಮಿಸಿ, ಗೌರವಿಸಲಾಯಿತು.

<><><>

ಯುವಕ-ಯುವತಿಯರಿಗೆ ವಿವಾಹಪೂರ್ವ ಆಪ್ತ ಸಮಾಲೋಚನೆ ಸೌಲಭ್ಯ ಒದಗಿಸುವ, "ತೇರೆ ಮೇರೆ ಸಪ್ನೆ' ಸಂವಹನ ಕೇಂದ್ರಕ್ಕೆ, ರಾಷ್ಟ್ರೀಯ ಮಹಿಳಾ ಆಯೋಗ ದಿಲ್ಲಿಯಲ್ಲಿ, ಚಾಲನೆ ನೀಡಿತು.

<><><>

ಬೆಂಗಳೂರಿನಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, 26 ಜನ ಸಾಧಕಿಯರಿಗೆ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಿದರು.

<><><>

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಸ್ಥಾಪಿತ, ಗೌರಮ್ಮ ಚೆನ್ನಪ್ಪ ಹಲಗತ್ತಿ ದತ್ತಿ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಗೌರವ ಪುರಸ್ಕಾರಕ್ಕೆ, ಹಾವೇರಿ ಜಿಲ್ಲೆ, ಮಾಹೂರ ಗ್ರಾಮದ, ನಿಂಗಮ್ಮ ಸವಣೂರ, ಭಾಜನರಾಗಿದ್ದಾರೆ. 'ಶ್ರಮಿಕ ಮಹಿಳೆ' ಪ್ರಶಸ್ತಿ ಪ್ರದಾನ ಮಾಡಿ, ಗಣ್ಯರು ಗೌರವಿಸಿದರು. ನಿಂಗಮ್ಮ ಅವರ ಕರ್ತೃತ್ವ ಶಕ್ತಿಯ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ.

<><><>

ಶಂಕರ ಹಲಗತ್ತಿ ಧ್ವನಿ 45 ಸೆಕೆಂದುಗಳು

<><><>

ಶಿಕ್ಷಣ ತಜ್ಞ, ಪದ್ಮಭೂ ಷಣ, ಡಾಕ್ಟರ್ ಎಚ್.ನರಸಿಂಹಯ್ಯ ಅವರು ಓದಿದ, ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕು, ಹೊಸೂರು ಗ್ರಾಮದ, ಶತಮಾನ ಪೂರೈಸಿದ ಶಾಲೆಯನ್ನು ಅಭಿವೃದ್ಧಿ ಪಡಿಸಲು, ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ, ಮುಖ್ಯಮಂತ್ರಿಯವರು, ಪ್ರಾವಧಾನ ಕಲ್ಪಿಸಿದ್ದಾರೆ. ಡಾಕ್ಟರ್ ಹೆಚ್.ಎನ್. ಅವರ ವೈಚಾರಿಕ ಚಿಂತನೆಗಳನ್ನು, ನಾಡಿನಾದ್ಯಂತ ಪಸರಿಸಲು, ಡಾಕ್ಟರ್ ಎಚ್.ನರಸಿಂಹಯ್ಯ ಪ್ರಾಧಿಕಾರ ಸ್ಥಾಪಿಸಲು, ಆರ್ಥಿಕ ಸಂಪನ್ಮೂಲ ಒದಗಿಸಿದ್ದಾರೆ. ಎಚ್.ಎನ್.

ಅವರ ಹುಟ್ಟೂರು, ಹೊಸೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ, ಹಳೆಯ ವಿದ್ಯಾರ್ಥಿಗಳ ಸಂಘ, ಮುಖ್ಯಮಂತ್ರಿಯರನ್ನು ಅಭಿನಂದಿಸಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಕಲಬುರಗಿ ಉಚ್ಚ ನ್ಯಾಯಾಲಯ ಪೀಠದಲ್ಲಿ ಜರುಗಿದ, ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ, 262 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿ, 5 ಕೋಟಿ 79 ಲಕ್ಷ 96 ಸಾವಿರದ 200 ರೂಪಾಯಿ ಪರಿಹಾರ ನೀಡುವಂತೆ, ಜನತಾ ಅದಾಲತ್ ಆದೇಶಿಸಿತು. ನ್ಯಾಯಮೂರ್ತಿ ಸಿ.ಎಮ್. ಜೋಶಿ ಹಾಗೂ ನ್ಯಾಯಮೂರ್ತಿ ವಿಜಯಕುಮಾರ ಪಾಟೀಲ ಭಾಗವಹಿಸಿದ್ದರು ಎಂದು, ಕಲಬುರಗಿ ಉಚ್ಚ ನ್ಯಾಯಾಲಯ ಕಾನೂನು ಸೇವಾ ಸಮಿತಿಯ ಕಾರ್ಯದರ್ಶಿ, ದಯಾನಂದ ಹಿರೇಮಠ ತಿಳಿಸಿದ್ದಾರೆ.

<><><>

ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿ ಆಯೋಜಿತ, ಜನತಾ ನ್ಯಾಯಾಲಯದಲ್ಲಿ, ಹಿರಿಯ ನ್ಯಾಯಮೂರ್ತಿ ಎಸ್ ಜಿ. ಪಂಡಿತ ಹಾಗೂ ನ್ಯಾಯಮೂರ್ತಿಗಳಾದ ಸಿ.ಎಮ್. ಪೂಣಚ್ಚ, ಜಿ. ಬಸವರಾಜ ಮತ್ತು ಉಮೇಶ ಅಡಿಗ ಅವರಿದ್ದ, ನಾಲ್ಕು ಪೀಠಗಳಲ್ಲಿ ಲೋಕ ಅದಾಲತ್ ಜರುಗಿತು. ಒಟ್ಟು 781 ಪ್ರಕರಣಗಳನ್ನು ವಿಚಾರಣೆಗೆ ಪೀಠಗಳು ಕೈಗೆತ್ತಿಕೊಂಡು, ಒಟ್ಟು 231 ಪ್ರಕರಣಗಳನ್ನು ಇತ್ಯರ್ಥ ಪಡಿಸಿವೆ. ಒಟ್ಟು 7 ಕೋಟಿ 49 ಲಕ್ಷ 18 ಸಾವಿರದ 676 ರೂಪಾಯಿ ಪರಿಹಾರಕ್ಕೆ, ಆದೇಶ ಹೊರಡಿಸಲಾಗಿದೆ ಎಂದು, ಧಾರವಾಡ ಪೀಠದ ಕಾರ್ಯದರ್ಶಿ ಜೆರಾಲ್ಡ್ ರುಡಾಲ್ಫ್ ಮೆಂಡೋನ್ಸಾ ತಿಳಿಸಿದ್ದಾರೆ.

<><><>

ಮಾನವ–ವನ್ಯಜೀವಿ ಸಂಘರ್ಷ ತಡೆಗೆ, ಆನೆ ಕಾರ್ಯಪಡೆ ಮತ್ತು ಚಿರತೆ ಕ್ಷಿಪ್ರ ಕಾರ್ಯಪಡೆಗಳ ನಿರ್ವಹಣೆಗೆ, ಮುಖ್ಯಮಂತ್ರಿಯವರು ಬಜೆಟ್‌ನಲ್ಲಿ 17 ಕೋಟಿ ರೂಪಾಯಿ ಒದಗಿಸಿದ್ದಾರೆ, ಎಂದು ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಬೀದರ್‌ನಲ್ಲಿ ಈ ವಿಷಯ ತಿಳಿಸಿದ ಸಚಿವರು, ಆನೆ ಸಂಘರ್ಷವಿರುವ ಪ್ರದೇಶದಲ್ಲಿ, ರೇಲ್ವೆ ಹಳಿ ತಡೆಗೋಡೆ ನಿರ್ಮಾಣಕ್ಕೆ, ಪ್ರಸಕ್ತ ಹಣಕಾಸು ವರ್ಷದಲ್ಲಿ, 60 ಕೋಟಿ ರೂಪಾಯಿ ಮೀಸಲಿರಿಸಲಾಗಿದೆ. ವನ್ಯಜೀವಿ ದಾಳಿಯಿಂದ ಮೃತಪಟ್ಟವರ ಕುಟುಂಬಕ್ಕೆ ನೀಡಲಾಗುವ, ಪರಿಹಾರದ ಮೊತ್ತವನ್ನು, 15 ರಿಂದ, 20 ಲಕ್ಷ ರೂಪಾಯಿಗೆ ಹೆಚ್ಚಿಸಲಾಗಿದೆ ಎಂದರು.

<><><>

ಮಾನವ–ಆನೆ ಸಂಘರ್ಷ ತಡೆಯಲು, ಭದ್ರಾ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ 20 ಚದರ ಕಿಲೋ ಮೀಟರ್ ವ್ಯಾಪ್ತಿಯಲ್ಲಿ, ಆನೆ ಧಾಮ (ಸಾಫ್ಟ್ ರಿಲೀಸ್ ಸೆಂಟರ್) ನಿರ್ಮಿಸಲು, 20 ಕೋಟಿ ರೂಪಾಯಿ ಹಾಗೂ 'ಆನೆ ಧಾಮ'ದಿಂದ, ಕೊಡಗು, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯ ಆನೆಯ ಸಮಸ್ಯೆಗೆ ಪರಿಹಾರ ಸಿಗಲಿದೆ ಎಂದರು.

<><><>

2024–25ನೇ ಸಾಲಿನ, ಪಂಡಿತ ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಪ್ರಶಸ್ತಿಗೆ ಬಳ್ಳಾರಿ ಜಿಲ್ಲೆ, ಏಳುಬೆಂಚಿ ಗ್ರಾಮದ ಪಂಡಿತ್ ಡಿ.ಕುಮಾರ್‌ದಾಸ್ ಹಾಗೂ ಯುವ ಪ್ರಶಸ್ತಿಗೆ ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲೂಕು, ಮುತ್ತಮುರ್ಡು ಗ್ರಾಮದ ಯುವ ಗಾಯಕ ವಿನಾಯಕ ಹೆಗಡೆ ಭಾಜನರಾಗಿದ್ದಾರೆ. ಪದ್ಮವಿಭೂಷಣ, ಡಾಕ್ಟರ್ ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ವತಿಯಿಂದ, ಧಾರವಾಡದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ, ನಾಳೆ ಸಂಜೆ 5.30ಕ್ಕೆ, ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿತವಾಗಿದೆ. ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

<><><>

ಧಾರವಾಡ ಆಕಾಶವಾಣಿಯ ನಿಲಯ ಕಲಾವಿದರಾಗಿ ಸೇವೆ ಸಲ್ಲಿಸಿರುವ, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದ ಹಿರಿಯ ಗಾಯಕ ಡಿ.ಕುಮಾರ್‌ದಾಸ್, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಪಂಡಿತ್ ಡಿ.ಕುಮಾರ್‌ದಾಸ್ ಧ್ವನಿ 35 ಸೆಕೆಂದುಗಳು

<><><>

ತುಳು ಸಾಹಿತ್ಯ ಅಕಾದೆಮಿಯ, 2023ನೇ ಸಾಲಿನ, ನಾಟಕ ಸಾಹಿತ್ಯ ಪ್ರಶಸ್ತಿ, ದಕ್ಷಿಣಕನ್ನಡ ಜಿಲ್ಲೆ, ಬಂಟ್ವಾಳ ತಾಲೂಕು, ವಿಟ್ಲ ಸಮೀಪದ, ಅಳಿಕೆ ನೆಕ್ಕಿದಪುಣಿ ಬಿಲ್ಲವರ ಪ್ರತಿಷ್ಠಿತ ಮನೆ, ಕರಂಬೇರ ತರವಾಡಿನ ಮುಖ್ಯಸ್ಥರು, ತುಳು – ಕನ್ನಡ ಸಾಹಿತಿ, ಗೋಪಾಲಕೃಷ್ಣ ಅವರ ಮುಡಿಗೇರಿದೆ. ತುಳುವಿನಲ್ಲಿ 28ಕ್ಕೂ ಹೆಚ್ಚು ಕೃತಿಗಳನ್ನು ಹಾಗೂ 12ಕ್ಕೂ ಹೆಚ್ಚು, ಕನ್ನಡ ಗದ್ಯ ಕೃತಿಗಳನ್ನು ಅವರು ರಚಿಸಿದ್ದಾರೆ. 250 ಕುಟುಂಬಗಳನ್ನು ಹೊಂದಿದ, ಕರಂಬೇರ ತರವಾಡಿನ ಮುಖ್ಯಸ್ಥರಾಗಿ, ತುಳು ನಾಡಿನ ಆರಾಧನಾ ಸಂಪ್ರದಾಯವನ್ನು ಮುಂದುವರಿಸಿಕೊಂಡು, ತೌಳವ ಸಂಸ್ಕೃತಿಯ ಪೋಷಕರಾಗಿ, ಅವರು ಖ್ಯಾತಿ ಪಡೆದಿದ್ದಾರೆ.

<><><>

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ, ರಾಜ್ಯ ಮಟ್ಟದ ದತ್ತಿ ನಿಧಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು, ಇಂದು ಕೊಪ್ಪಳದಲ್ಲಿ ಆಯೋಜಿಸಿದೆ. ಸಾನಿಧ್ಯವನ್ನು ಗವಿಸಿದ್ದೇಶ್ವರ ಸ್ವಾಮೀಜಿ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ ಅಥಿತಿಯಾಗಿ ಪಾಲ್ಗೊಳ್ಳುವರು. ಪತ್ರಕರ್ತರ ಸಂಘದ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರ ಅಧ್ಯಕ್ಷತೆ ವಹಿಸಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಕೊಪ್ಪಳ ಜಿಲ್ಲೆ, ಗಂಗಾವತಿ ತಾಲೂಕಿನ ಸಾಣಾಪುರದಲ್ಲಿ, ಇಸ್ರೇಲ್ ಪ್ರಜೆ ಹಾಗೂ ಹೋಂ ಸ್ಟೇ ಮಾಲೀಕರ ಮೇಲೆ ನಡೆದ, ಹಲ್ಲೆ ಹಾಗೂ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿ, ಇಬ್ಬರು ಆರೋಪಿಗಳನ್ನು ಪೊಲೀಸರು, ಬಂಧಿಸಿದ್ದಾರೆ.

<><><>

ಗದಗ ಕೆ.ಎಚ್. ಪಾಟೀಲ ಕ್ರೀಡಾಂಗಣದಲ್ಲಿ, ಇಂದು ಬೆಳಗ್ಗೆ 7 ಗಂಟೆಗೆ, ಪೊಲೀಸ್ ಇಲಾಖೆ ಆಯೋಜಿತ, "ಮಾದಕ ದ್ರವ್ಯ ಹಾಗೂ ಸೈಬರ್ ಅಪರಾಧ ಮುಕ್ತ ಜಿಲ್ಲೆ" ಮ್ಯಾರಾಥಾನ್ ಆರಂಭವಾಗಿದೆ.

<><><>

ಹಾಸನದ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ, ಇಂದು ಬೆಳಗ್ಗೆ 8 ಗಂಟೆಗೆ, ಪೊಲೀಸ್ ರನ್ ಮ್ಯಾರಾಥಾನ್ ಆಯೋಜಿತವಾಗಿದೆ.

<><><>

ಧಾರವಾಡದ ಕರ್ನಾಟಕ ಕಾಲೇಜಿನ ಆವರಣದಲ್ಲಿ, ಇಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 5ರ ವರೆಗೆ, ಕೌಶಲ ರೋಜಗಾರ ಉದ್ಯೋಗ ಮೇಳ ಜರುಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ತುಂಗಭದ್ರಾ ನೀರಿನ ಸದ್ಬಳಕೆ; ಆಂಧ್ರ ಮತ್ತು ತೆಲಂಗಾಣಾ ಮುಖ್ಯಮಂತ್ರಿಗಳ ಜೊತೆ, ಶೀಘ್ರ ಸಭೆ – ಡಿ.ಕೆ.ಶಿವಕುಮಾರ.
- 'ನಾರಿ ಶಕ್ತಿಯಿಂದ, ವಿಕಸಿತ ಭಾರತ' ಧ್ಯೇಯದೊಂದಿಗೆ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ.
- ಲೋಕ ಅದಾಲತ್; ನ್ಯಾಯಾಲಯಗಳಲ್ಲಿ ಸಂಧಾನದ ಮೂಲಕ, ಗಣನೀಯ ಪ್ರಕರಣಗಳ ಇತ್ಯರ್ಥ.
- ಪಂಡಿತ ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಪ್ರಶಸ್ತಿಗೆ ಡಿ.ಕುಮಾರ್‌ದಾಸ್ ಹಾಗೂ ಯುವ ಪ್ರಶಸ್ತಿಗೆ ವಿನಾಯಕ ಹೆಗಡೆ ಭಾಜನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>